**2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು**

**ಸಿ. ಸಿ.ನಂ. 510/2019**

ದಿನಾಂಕಃ **19.02.2026**ರಂದು **ಪ್ರಮಾಣ ವಚನ ಬೋಧಿಸಲಾಯಿತು.**

ಆರೋಪಿಯ **ಮುಖ್ಯ** ವಿಚಾರಣೆ ಃ ಶ್ರೀ ಎಂ. ಎನ್. ವಿ ವಕೀಲರಿಂದ ಆರೋಪಿಯ ಪರವಾಗಿ

ನನಗೂ ಪಿರ್ಯಾದಿಗೂ ಯಾವುದೇ ರೀತಿಯ ಪರಿಚಯ, ವಿಶ್ವಾಸ ಹಾಗೂ ವ್ಯವಹಾರ ನಡೆದಿರುವುದಿಲ್ಲ. ಈ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದೇ ದಿನಾಂಕದಂದು ಖಾಲಿ ಚೆಕ್ ಗೆ ಸಹಿ ಮಾಡಿ ಕೊಟ್ಟಿರುವುದಿಲ್ಲ. ನಾನು ಉಪಾಧ್ಯಾಯನಾಗಿ ಕೆಲಸ ಮಾಡುತ್ತಿರುವುದರಿಂದ ಪಿರ್ಯಾದಿಯಿಂದ ಹಣ ಪಡೆಯುವ ಯಾವುದೇ ದರ್ದು ನನಗೆ ಇರಲಿಲ್ಲ. ಹಾಗೂ ಪಿರ್ಯಾದುದಾರರು ನನಗೆ ಹಣ ಕೊಡುವಷ್ಟು ಆರ್ಥಿಕ ಸಾಮರ್ಥ್ಯ ಉಳ್ಳವರಲ್ಲ. ಆಗಿನ ಎಸ್ ಬಿ ಎಂ ಖಾತೆ ನಂ 54020644338 ನಿಂದ ನನಗೆ ಸಂಬಳ ಬರುತ್ತಿತ್ತು. 2006-07ರ ಸಾಲಿನಲ್ಲಿ ನಮ್ಮ ಶಾಲೆಯಲ್ಲಿ ಗುಮಾಸ್ತರು ಇರಲಿಲ್ಲ. ಸದರಿ ಕೆಲಸವನ್ನು ನಾನೇ ನಿರ್ವಹಣೆ ಮಾಡುತ್ತಿದ್ದೆನು. ಟ್ರಜರಿಯಿಂದ ಬಿಲ್ಲನ್ನು ಬ್ಯಾಂಕ್ ಗೆ ಕೊಡುವ ಸಮಯದಲ್ಲಿ ಸದರಿ ಬ್ಯಾಂಕಿನ ಚನ್ನಕೇಶವಯ್ಯ ಎಂಬ ಡಿ ದರ್ಜೆ ನೌಕರರು ನನಗೆ ಪರಿಚಯವಾಗಿದ್ದು ನನಗೆ ಸಂಬಳ ವಿಳಂಬ ಆದಾಗ ನಾನು ಅವರಿಂದ ಹಣ ಪಡೆಯುತ್ತಿದ್ದೆ ಮತ್ತು ಕೊಡುತ್ತಿದ್ದೆ. ಒಂದು ಬಾರಿ ನನಗೆ 2 ತಿಂಗಳ ಸಂಬಳ ಆಗಿರಲಿಲ್ಲ. ಸದರಿ ಸಮಯದಲ್ಲಿ ನನಗೆ 10ಸಾವಿರ ರೂಗಳ ಅವಶ್ಯಕತೆ ಇತ್ತು. ಆಗ ಸದರಿ ಚನ್ನಕೇಶವಯ್ಯ ನವರು 10 ಸಾವಿರು ರೂಗಳ ಭದ್ರತೆಗಾಗಿ ಖಾಲಿ ಚೆಕ್ಕನ್ನು ನನ್ನಿಂದ ಕೇಳಿರುತ್ತಾರೆ. ಆದ್ದರಿಂದ ನಾನು ಸಹಿ ಮಾಡಿದ ಖಾಲಿ ಚೆಕ್ಕನ್ನು ಅವರಿಗೆ ನೀಡಿರುತ್ತೇನೆ. ತದ ನಂತರ ನನಗೆ ಸಂಬಳ ಆದ ಮೇಲೆ ಸದರಿ ಹಣವನ್ನು ನಾನು ಅವರಿಗೆ ಮರುಪಾವತಿ ಮಾಡಿರುತ್ತೇನೆ. ಸದರಿ ಚನ್ನಕೇಶವ ಅವರ ಮೇಲೆ ನಂಬಿಕೆ ಇದ್ದ ಕಾರಣ ನನ್ನ ಖಾಲಿ ಚೆಕ್ ನ್ನು ನಾನು ಅವರಿಂದ ಹಿಂಪಡೆದಿರುವುದಿಲ್ಲ. ನಂತರ 2008-09ರ ಸಾಲಿನಲ್ಲಿ ಚನ್ನರಾಯಪಟ್ಟಣದ ನವೋದಯ ಶಾಲೆಗೆ ಡೆಪ್ಯೂಟೇಷನ್ ಮಾಡಲಾಯಿತು. ನಂತರ

2013ರಲ್ಲಿ ಖಾಯಂ ಆಗಿ ನನಗೆ ವರ್ಗಾವಣೆಯಾಗಿರುತ್ತದೆ. ಈ ನಡುವೆ ಚನ್ನಕೇಶವಯ್ಯ ಹಾಗೂ ಪಿರ್ಯಾದುದಾರ ಚನ್ನಯ್ಯರವರು ಚನ್ನಕೇಶವ ರವರ ಅಳಿಯ ಎಂಬ ವಿಚಾರ ನನಗೆ ತಿಳಿದಿರಲಿಲ್ಲ. ಚನ್ನಕೇಶವಯ್ಯ ರವರಿಗೆ ಆರೋಗ್ಯ ಸರಿಯಿಲ್ಲದ ಸಮಯದಲ್ಲಿ ಚನ್ನಯ್ಯ ರವರು ನನ್ನ ಖಾಲಿ ಚೆಕ್ ನ್ನು ಅವರಿಂದ ಪಡೆದು ಸದರಿ ಚೆಕ್ ನ್ನು ಹೆಚ್ಚಿನ ಹಣದ ದುರಾಸೆಗಾಗಿ ನನ್ನ ಮೇಲೆ ಸುಳ್ಳು ಪ್ರಕರಣ ವನ್ನು ದಾಖಲಿಸಿರುತ್ತಾರೆ. ನಾನು ಇದರಿಂದ ಮಾನಸಿಕವಾಗಿ ತೊಂದರೆಗೆ ಒಳಗಾಗಿದ್ದೇನೆ.

ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು ಸಮಯವಕಾಶ ನೀಡಲಾಯಿತು.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾ.ದಲ್ಲಿ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸ.ಇದೆ.**

2ನೇ **ಅಧಿಕ ಜೆಎಂಎಫ್‌ಸಿ, ಅರಕಲಗೂಡು.**